# ಸ್ವಾಮಿ ವೀರೇಶ್ವರಾನಂದ

(೧೮೯೨ – ೧೯೮೫)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

ರಾಮಕೃಷ್ಣ ಮಹಾಸಂಘದ ೧೦ನೆಯ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ವೀರೇಶ್ವರಾನಂದಜಿಯವರ ಸ್ಮೃತಿಲೇಖನವಿದು. ಲೇಖಕರು ಅಮೆರಿಕದ ಸೈಂಟ್ ಲೂಯಿಸ್ ವೇದಾಂತ ಕೇಂದ್ರದ ಮುಖ್ಯಸ್ಥರು. ಅವರ ಬಂಗಾಳಿ ಗ್ರಂಥ **'ಪ್ರಾಚೀನ ಸಾಧುದೇರ್ ಕಥಾ'** ದಿಂದ ಈ ಲೇಖನವನ್ನು ಆರಿಸಲಾಗಿದೆ. ಅನುವಾದಕಿ ವಾರಣಾಸಿ ಸೇವಾಶ್ರಮದಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



**ದೇ**ಹಾಕೃತಿಯನ್ನು ನೋಡಿ ಅನೇಕರು ವ್ಯಕ್ತಿಯ ಚರಿತ್ರೆ ಹಾಗೂ ಗುಣಗಳನ್ನು ಅಳೆಯುವುದುಂಟು. ಆದರೆ ಇದು ಯಾವಾಗಲೂ ಸರಿಯೆಂದು ಹೇಳಲಾಗುವುದಿಲ್ಲ. ಅಮೆರಿಕದ ಪ್ರೆಸಿಡೆಂಟ್ ಲಿಂಕನ್‌ಗೆ ಸಂಬಂಧಿಸಿದ ಒಂದು ಘಟನೆ ನೆನಪಾಗುತ್ತದೆ. ಅವರು ಹಾಗೂ ಅವರ ವಿರೋಧಿ ಡಾಗ್ಲಸ್ ನಡುವೆ ಚುನಾವಣೆಗೆ ಮುಂಚೆ ಒಂದು ಚರ್ಚೆ ಏರ್ಪಡಿಸಲಾಗಿತ್ತು. ಡಾಗ್ಲಸ್ ಹೇಳಿದರು, ''ಸ್ನೇಹಿತರೆ, ಲಿಂಕನ್ ಒಬ್ಬ ಎರಡು-ಮುಖದ ವ್ಯಕ್ತಿ; ನೀವು ಅವರಿಗೆ ಓಟನ್ನು ನೀಡಬೇಡಿ,'' ಎಂದು. ಲಿಂಕನ್ ಪ್ರತಿಪಾದಿಸಿದರು, ''ಸ್ನೇಹಿತರೆ, ನನಗೆ ಇನ್ನೊಂದು ಮುಖವೇನಾದರೂ ಇದ್ದಿದ್ದರೆ, ಈ ಮುಖವನ್ನೇಕೆ ಧರಿಸುತ್ತಿದ್ದೆ?'' ನೋಡಲು ಅವರು ರೂಪವಂತರೇನೂ ಆಗಿರದಿದ್ದ ಕಾರಣ, ಅವರಿಗೇನಾದರೂ ಇನ್ನೊಂದು ಮುಖವಿದ್ದಿದ್ದರೆ ಅದನ್ನು ಬದಲಾಯಿಸಿಕೊಳ್ಳುತ್ತಿದ್ದರೆಂದೇ ಅವರ ಮಾತಿನ ಅರ್ಥ. ಅಂದಿನಿಂದ ಇಂದಿನವರೆಗೆ ಅಮೆರಿಕದ ಎಲ್ಲ ಅಧ್ಯಕ್ಷರುಗಳಲ್ಲಿ ಅವರಷ್ಟು ಶ್ರದ್ಧಾ-ಪ್ರೀತಿಗಳಿಗೆ ಪಾತ್ರರಾದವರು ಬೇರೊಬ್ಬರಿಲ್ಲ.

ಸ್ವಾಮಿ ವೀರೇಶ್ವರಾನಂದಜಿಯವರದು ಸಣ್ಣ ನಿಲುವು. ಯಾರ ದೃಷ್ಟಿಗೂ ಅವರು ಸಾಮಾನ್ಯವಾಗಿ ಗೋಚರವಾಗುತ್ತಿರಲಿಲ್ಲ. ಆದರೂ ಅವರ ವ್ಯಕ್ತಿತ್ವವು ಅಸಾಧಾರಣವಾಗಿದ್ದು, ಬುದ್ಧಿಯು ತೀಕ್ಷ್ಣ ಹಾಗು ಪ್ರಚಂಡವಾಗಿತ್ತು. ೧೯೬೮ರಿಂದ ೧೯೮೫ರ ವರೆಗೆ ನಾನು ಅವರನ್ನು ನೋಡಿರುವೆ. ಅವರ ಸಾನ್ನಿಧ್ಯವನ್ನು ಚೆನ್ನಾಗಿ ಪಡೆಯುವ ಸೌಭಾಗ್ಯ ನನಗಿರಲಿಲ್ಲವಾದ್ದರಿಂದ ನನ್ನ ಸ್ಮೃತಿಭಂಡಾರದಲ್ಲಿ ಹುದುಗಿರುವ ಕೆಲವೇ ಘಟನೆಗಳನ್ನು ಬರೆಯುತ್ತಿರುವೆ.

ನಾನು ಮಠವನ್ನು ಸೇರಿದಾಗ ಸ್ವಾಮಿ ವೀರೇಶ್ವರಾನಂದಜಿಯವರು ಮಠ-ಮಿಷನ್ನಿನ ಸಹ-ಕಾರ್ಯದರ್ಶಿಯಾಗಿದ್ದರು. ಗಿರೀಶ್ ಮೆಮೋರಿಯಲ್ ಕಟ್ಟಡದ ಮೇಲಂತಸ್ತಿನಲ್ಲಿ ಚಿಕ್ಕದೊಂದು ಕೋಣೆಯಲ್ಲಿ ಅವರಿರುತ್ತಿದ್ದರು. ೧೯೬೧ ರಲ್ಲಿ ಸ್ವಾಮಿ ಶಂಕರಾನಂದಜಿಯವರಿಂದ ನಾನು ದೀಕ್ಷೆಯನ್ನು ಪಡೆದು, ಸ್ವಾಮಿ ವೀರೇಶ್ವರಾನಂದಜಿಯವರಿಗೆ ನಮಸ್ಕರಿಸುತ್ತ ಸಾಧು ಜೀವನದ ಬಗ್ಗೆ ಏನಾದರೂ ಹೇಳಬೇಕೆಂದು ಕೋರಿದಾಗ ಅವರೆಂದರು: ''ಸಾಧು ಜೀವನವನ್ನು ಸರಿಯಾಗಿ ನಡೆಸಲು ಅನೇಕ ಉಪದೇಶಗಳ ಅಗತ್ಯವಿಲ್ಲ. 'ಧರ್ಮಪ್ರಸಂಗೇ ಸ್ವಾಮಿ ಬ್ರಹ್ಮಾನಂದ' (ಕನ್ನಡದಲ್ಲಿ 'ಬ್ರಹ್ಮಾನಂದ ವಚನಸುಧೆ') ಹಾಗೂ 'ತುರಿಯಾನಂದರ ಪತ್ರ' – ಈ ಎರಡು ಪುಸ್ತಕಗಳನ್ನು ಓದು, ಸಾಕು. ಎಲ್ಲವೂ ತಿಳಿಯುತ್ತದೆ'' ಎಂದರು. ಅಧ್ಯಾತ್ಮ ಜೀವನವನ್ನು ನಡೆಸಲು ನಾನು ಈ ಎರಡು ಪುಸ್ತಕಗಳನ್ನು ಅವಲಂಬಿಸಿರುವೆ. ಬಹುತೇಕ ಸಾಧುಗಳು ಉಪದೇಶಗಳನ್ನು ನೀಡುತ್ತಾರೆ, ನಿಜ, ಆದರೆ ಸ್ವಾಮಿ ಬ್ರಹ್ಮಾನಂದರು ತಮ್ಮ ಸ್ವಂತ ಅನುಭವಗಳನ್ನು ಹೃದಯದಲ್ಲಿ ಚಿರಕಾಲ ಉಳಿಯುವಂತೆ ಹೇಳಿದ್ದಾರೆ. ಅಧ್ಯಾತ್ಮ ಜೀವನದಲ್ಲಿ ಮನಸ್ಸು ಇಳಿಮುಖವಾದಾಗ (ಅನುಭಾವಿಗಳು ಹೇಳಿದಂತೆ 'dark night of the Soul') ಸ್ವಾಮಿ ತುರೀಯಾನಂದರ ಪತ್ರಗಳು ಮನಸ್ಸನ್ನು ಮೇಲೆತ್ತುತ್ತವೆ. ನಂತರದ ಸಮಯದಲ್ಲಿ 'A Guide to Spiritual Life' ಮತ್ತು 'Spiritual Treasures' ಎಂಬ ಈ ಎರಡು ಪುಸ್ತಕಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದೆ.

೧೯೬೨ರಲ್ಲಿ ಸ್ವಾಮಿ ಮಾಧವಾನಂದರು ಪರಮಾಧ್ಯಕ್ಷರಾದಾಗ ಸ್ವಾಮಿ ವೀರೇಶ್ವರಾನಂದಜಿಯವರು ಪ್ರಧಾನ ಕಾರ್ಯ

ದರ್ಶಿಗಳಾದರು. ನಾನಾಗ ಬ್ರಹ್ಮಚಾರಿಯಾಗಿ ಅದ್ವೈತ ಆಶ್ರಮದಲ್ಲಿದ್ದೆ. ಒಂದು ದಿನ ಅವರು ಒಂದೂವರೆ ಪಾವು ಹಾಲು ಹಿಡಿಸುವ ಪಾತ್ರೆಯನ್ನು ಕೊಂಡು ತರಲು ಹೇಳಿದರು. ಒಂದೂವರೆ ಪಾವಿನ ಹಾಲಿನ ಪಾತ್ರೆ ದೊರೆಯದೆ, ಚಾಂದನಿ ಚೌಕದಿಂದ ಅರ್ಧ ಸೇರಿನ (ಗಾಜಿನ ಮುಚ್ಚಳವಿದ್ದ) ಪಾತ್ರೆಯನ್ನು ತೆಗೆದುಕೊಂಡು ಅವರ ಬಳಿ ಹೋದಾಗ ಅವರೆಂದರು, ''ಇಲ್ಲ, ಈ ಪಾತ್ರೆ ಸ್ವಲ್ಪ ದೊಡ್ಡದಾಯಿತು. ಒಂದೂವರೆ ಪಾವಿನ ಪಾತ್ರೆಯನ್ನು ಕೊಂಡು ತಾ.'' ಮತ್ತೆ ಕಲ್ಕತ್ತದ ಚೈನಾ ಬಜಾರು, ಚಾಂದನಿ ಚೌಕವೆಲ್ಲ ಸುತ್ತಾಡಿದರೂ ಅವರು ಹೇಳಿದ ಅಳತೆಯ ಪಾತ್ರೆ ಸಿಗದೆ, ೨-೩ ಗಾತ್ರದ ಪಾತ್ರೆಗಳನ್ನು ತೆಗೆದುಕೊಂಡು ಮಠಕ್ಕೆ ಬಂದು, ''ಈ ಅಳತೆಯ ಪಾತ್ರೆಗಳು ಮಾತ್ರವೇ ಇವೆ. ನೀವು ಹೇಳಿದ ಅಳತೆಯ ಪಾತ್ರೆ ಬಜಾರಿನಲ್ಲಿಲ್ಲ'' ಎಂದಾಗ ಮನಸ್ಸಿಲ್ಲದ ಮನಸ್ಸಿನಿಂದ ಅರ್ಧ ಸೇರಿನ ಪಾತ್ರೆಯನ್ನು ತೆಗೆದುಕೊಂಡರು. ಅವರು ಅಡುಗೆ ಮನೆಗೆ ಪಾತ್ರೆಯನ್ನು ಕಳುಹಿಸಿ ಹಾಲು ತೆಗೆದುಕೊಳ್ಳುತ್ತಾರೆ ಎಂದು ನಂತರ ನನಗೆ ತಿಳಿದುಬಂತು. ಆಗ ಮಠದಲ್ಲಿ ಹಾಲಿಗೆ ಅಭಾವವಿದ್ದು ಅವರು ಜನರಲ್ ಸೆಕ್ರೆಟರಿಗಳಾಗಿದ್ದರಿಂದ ಮಠದ ಭಂಡಾರಿಗಳು ಪಾತ್ರೆ ತುಂಬ ಹಾಲು ಕೊಟ್ಟರೆ ಇತರ ಸಾಧುಗಳಿಗೆ ತೊಂದರೆಯಾಗುತ್ತದೆ ಎಂಬ ಭಾವನೆ ಅವರಲ್ಲಿತ್ತೆಂದು ತಿಳಿದೆ. ಘಟನೆ ಅತಿ ಸಾಮಾನ್ಯವೆಂದು ತೋರಿದರೂ, ಇತರ ಸಾಧುಗಳ ಮೇಲಿನ ಅವರಿಗಿದ್ದ ಪ್ರೀತಿ ಹಾಗು ಅವರ ಹಿರಿಮೆಗೆ ಇದೊಂದು ನಿದರ್ಶನ.

ಮತ್ತೊಂದು ದಿನ ಯಾವುದೋ ಒಂದು ವಿಷಯವನ್ನು ನನ್ನಿಂದ ತಿಳಿಯಬಯಸಿದರು. ಸ್ಪಷ್ಟ ಉತ್ತರ ಕೊಡಲಾಗದೆ 'ಅದು ಹಾಗಿರುವಂತೆ ತೋರುತ್ತಿದೆ' ಎಂದು ಹೇಳಿದೆ. ಸ್ವಲ್ಪ ಕ್ರುದ್ಧರಾಗಿಯೇ ಅವರು ಹೇಳಿದರು ''ನೀನು ಎಂದಿಗೂ 'ಹಾಗಿರುವಂತೆ', 'ತೋರುತ್ತಿದೆ' ಅಥವಾ 'ನನಗೆ ಗೊತ್ತಿಲ್ಲ' ಎಂದೆಲ್ಲ ಹೇಳಬೇಡ. ನಿನ್ನ ಮಾತಿನ ಮೇಲೆ ನಾನೊಂದು ನಿರ್ಧಾರ ತೆಗೆದುಕೊಂಡೆ ಎಂದಿಟ್ಟುಕೊ. ನಿನ್ನ ಮಾತು ಸರಿಯಾಗಿರದಿದ್ದರೆ, ನನ್ನ ನಿರ್ಧಾರ ಕೂಡ ತಪ್ಪಾಗುತ್ತದೆ.'' ಇದರಿಂದ ನಾನೊಂದು ಅಪೂರ್ವ ಪಾಠವನ್ನು ಕಲಿತೆ.

ಇನ್ನೊಂದು ದಿನ ಅದ್ವೈತ ಆಶ್ರಮದಿಂದ ಬೇಲೂರು ಮಠಕ್ಕೆ ಹೋದಾಗ ''ಮಹಾರಾಜ್, ಹೇಗಿದ್ದೀರಿ?'' ಎಂದು ನಾನು ಕೇಳಿದಾಗ ಅವರು ಕೋಪಿಸಿಕೊಂಡು ಉತ್ತರಿಸಿದರು, ''ನಾನು ಕೆಲಸ ಮಾಡುತ್ತಿರುವುದು ನಿನಗೆ ಕಾಣದೆ?'' ಇಂತಹ ಪ್ರಶ್ನೆಗಳನ್ನು ಅವರು ಇಷ್ಟಪಡುತ್ತಿರಲಿಲ್ಲ.

ಅವರು ಅತ್ಯಂತ ಅಲ್ಪಾಹಾರಿ — ಪಕ್ಷಿಯಂತೆ ಸ್ವಲ್ಪ ಸ್ವಲ್ಪವೇ ತಿನ್ನುತ್ತಿದ್ದರು. ಆದರೆ ಬಾಯಿ ಸುಟ್ಟುಹೋಗುವಷ್ಟು ಬಿಸಿಯಾದ ಚಹಾ ಅಥವ ಕಾಫಿ ಕುಡಿಯುತ್ತಿದ್ದರು. ಮಹಾರಾಜರ ಆದೇಶದಂತೆ ಕಲ್ಕತ್ತದ ನ್ಯೂ ಮಾರ್ಕೆಟ್‌ನಿಂದ ಒಮ್ಮೊಮ್ಮೆ ಟಾ ಶುಂಠಿ ಮಿಠಾಯಿಯನ್ನು ತೆಗೆದುಕೊಂಡು ಹೋಗುತ್ತಿದ್ದೆ. ಖಾರವಾದ ಮಿಠಾಯಿಗಳನ್ನು ಅವರು ಇಷ್ಟಪಡುತ್ತಿದ್ದರು. ೧೯೬೪ರಲ್ಲಿ ನಾನು ಟ್ರೈನಿಂಗ್ ಸೆಂಟರ್‌ನಲ್ಲಿದ್ದಾಗ ಠಾಕೂರರ ನೇರಶಿಷ್ಯರೊಬ್ಬರ ಜನ್ಮದಿನದಂದು ಅವರಿಗೆ ಪ್ರಣಾಮ ಮಾಡುವುದಕ್ಕೆ ನಾವೆಲ್ಲ ಅವರ ಬಳಿಗೆ ಹೋಗಿದ್ದೆವು. ಸಾಯಂಕಾಲ ಒಂದಿಷ್ಟು ಚಹಾವಲ್ಲದೆ ನಮಗೆ ತಿನ್ನಲು ಏನೂ ಸಿಗುತ್ತಿರಲಿಲ್ಲವೆಂದು ತಿಳಿದಿದ್ದ ಅವರು, ನನ್ನನ್ನು ಸ್ವಲ್ಪ ಹೊತ್ತಿನ ಬಳಿಕ ಅವರ ಹತ್ತಿರ ಬರಲು ಹೇಳಿ, ಯಾರೋ ಅವರಿಗೆಂದು ತಂದುಕೊಟ್ಟಿದ್ದ ದಕ್ಷಿಣ ಭಾರತದ ಚಕ್ಕುಲಿ, ಮಿಕ್ಸ್ಚರ್ ಮುಂತಾದ ತಿಂಡಿಗಳನ್ನು ಕೊಟ್ಟು ನಮಗೆಲ್ಲರಿಗೂ ಚಹಾದೊಂದಿಗೆ ತಿನ್ನಲು ಹೇಳಿದರು. ಅವರಿಗೆ ನಮ್ಮ ಮೇಲಿದ್ದ ಸಹಾನುಭೂತಿಯನ್ನು ಕಂಡು ನಾನು ಮುಗ್ಧನಾದೆ. ನಂತರ ಅವರು ಪರಮಾಧ್ಯಕ್ಷರಾಗಿದ್ದಾಗ, ಅಮೆರಿಕಾದ ಓರ್ವ ಭಕ್ತರಿಂದ ಪಡೆದಿದ್ದ ೧೨,೦೦೦ ಡಾಲರುಗಳ ದಾನವನ್ನು ನಾನು ಟ್ರೈನಿಂಗ್ ಸೆಂಟರ್ ಬ್ರಹ್ಮಚಾರಿಗಳ ರಿಫ್ರೆಷ್‌ಮೆಂಟ್‌ಗೆಂದು ಅವರಿಗೆ ಕಳುಹಿಸಿದೆ. ''ನೀನು ಕಳುಹಿಸಿರುವ ಹಣ ಅದಕ್ಕಾಗಿಯೇ ಉಪಯೋಗಿಸಲ್ಪಡುವುದು; ಬ್ರಹ್ಮಚಾರಿಗಳ ಸಾಯಂಕಾಲದ ರಿಫ್ರೆಷ್‌ಮೆಂಟ್‌ನ ವ್ಯವಸ್ಥೆಯನ್ನು ಈಗಾಗಲೇ ಮಾಡಲಾಗಿದೆ'' ಎಂದು ಉತ್ತರಿಸಿದರು.

ಫೆಬ್ರವರಿ ೧೯೭೦ರಲ್ಲಿ, ಸ್ವಾಮಿ ವೀರೇಶ್ವರಾನಂದಜೀ ಲಕ್ನೌನ 'ವಿವೇಕಾನಂದ ಪಾಲಿಕ್ಲಿನಿಕ್' ಉದ್ಘಾಟಿಸಿದರು. ನಾವು ಸುಮಾರು ೧೭೦ ಸಾಧುಗಳು ಅಲ್ಲಿ ನೆರೆದಿದ್ದೆವು. ಸ್ವಾಮಿ ಶ್ರೀಧರಾನಂದಜೀಯವರು ಬಹಳ ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದರು. ಬ್ರಹ್ಮಾವರ್ತ, ಅಯೋಧ್ಯೆ, ನೈಮಿಷಾರಣ್ಯಗಳನ್ನು ದರ್ಶಿಸುವ ಸುಸಂದರ್ಭ ನಮಗೆ ಒದಗಿತ್ತು. ಪ್ರಭು ಮಹಾರಾಜರು ಹುಕ್ಕಾ ಸೇದುತ್ತಿದ್ದರು. ಶ್ರೀಧರಾನಂದಜಿಯವರು ಅವರಿಗಾಗಿ ಲಕ್ನೌನ ಬೆಲೆಬಾಳುವ ಸುಗಂಧಿತ ತಂಬಾಕನ್ನು ಕೊಂಡು ತಂದಿದ್ದರು. ಅದನ್ನು ಸೇದಿ ಸಂತೋಷಪಟ್ಟ ವೀರೇಶ್ವರಾನಂದಜಿ ಅವರಿಗೆ, ''ಏನಪ್ಪ, ನೀನು ನನಗಂತೂ ತಂಬಾಕು ಕುಡಿಸಿದೆ. ಬೇಲೂರು ಮಠದಲ್ಲಿ ವಿಕಾಸ, ದ್ವಾರಕಾ ಹಾಗು ಹಿತಾನಂದರೂ ತಂಬಾಕು ಸೇವಿಸುತ್ತಾರೆ. ಅವರಿಗೋಸ್ಕರ ಈ ತಂಬಾಕನ್ನು ಕೊಂಡು ತಾ'' ಎಂದರು. ಹೀಗೆ ಮಹಾರಾಜರು ಇತರ ಸಾಧುಗಳು ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು.

ನಾನು ಬೇಲೂರು ಮಠದ ಟ್ರೇನಿಂಗ್ ಸೆಂಟರಿನಲ್ಲಿದ್ದೆ. ಸ್ವಾಮೀಜಿಯವರ ಜನ್ಮದಿನದಂದು ಅವರ ಕೊಠಡಿಯಲ್ಲಿಯೆ ನಾನು ಕರ್ತವ್ಯ ನಿರ್ವಹಿಸಬೇಕಿತ್ತು. ಭಕ್ತರು ಸ್ವಾಮೀಜಿಯವರಿಗೆ ನಿವೇದಿಸಲೆಂದು ಅನೇಕ ಬಗೆಯ ಬೆಲೆಬಾಳುವ ಸಿಗರೇಟು ತರುತ್ತಿದ್ದರು. ಮತ್ತೆ ಮತ್ತೆ ಸ್ವಾಮೀಜಿಯವರ ಟೇಬಲ್‌ನ ಮೇಲಿದ್ದ ಸಿಗರೇಟು ಟ್ರೇಯಲ್ಲಿ ಸಿಗರೇಟುಗಳನ್ನಿರಿಸುವುದು ನನ್ನ ಕೆಲಸ. ಸಂಜೆಯ ಬಳಿಕ ಸ್ವಾಮೀಜಿಗೆ ರಾತ್ರಿ ನೈವೇದ್ಯದ ಬಳಿಕ ಪ್ರಭು ಮಹಾರಾಜರು ಸ್ವಾಮೀಜಿಯವರ ಕೋಣೆಗೆ ಬಂದು, ಸ್ವಾಮೀಜಿಯವರ ಪಾದುಕೆಗಳಿಗೆ ಪ್ರಣಾಮ ಸಲ್ಲಿಸಿ ''ಸ್ವಾಮೀಜಿಯವರ

ಸಿಗರೇಟ್ ಪ್ರಸಾದ ಇನ್ನೂ ಇದೆಯೆ, ನೋಡಪ್ಪ'' ಎಂದರು. ನಾನು ಕೆಲವು ಪ್ಯಾಕೇಟ್‌ಗಳನ್ನು ಅವರಿಗೆ ಕೊಟ್ಟೆ. ಹುಕ್ಕಾ ಅಥವಾ ಸಿಗರೇಟು ಸೇದುವಾಗ ಅವರು ಗಭೀರ ಭಾವದಲ್ಲಿ ಮಗ್ನರಾಗಿರುತ್ತಿದ್ದುದನ್ನು ನಾನು ಅನೇಕ ಬಾರಿ ಕಂಡಿದ್ದೇನೆ.

ಪ್ರಭು ಮಹಾರಾಜರು (ಸ್ವಾಮಿ ವೀರೇಶ್ವರಾನಂದಜಿಯವರನ್ನು ಹೆಚ್ಚಾಗಿ ಈ ಹೆಸರಿನಿಂದಲೇ ಕರೆಯುತ್ತಿದ್ದುದು) ಭಾವ ಪರವಶರಾಗಿದ್ದುದನ್ನು ನಾನೆಂದೂ ಕಂಡಿಲ್ಲ. ಆದರೆ ಸಾಧುಗಳ ಮೇಲೆ ಅವರಿಗೆ ಅಪಾರ ಪ್ರೀತಿಯಿತ್ತೆಂದು ಅವರ ಮಾತು ಹಾಗೂ ಕೃತಿಗಳಲ್ಲಿ ಎದ್ದು ಕಾಣುತ್ತಿತ್ತು . ಸಾಧುಗಳು ತಪ್ಪು ಮಾಡಿದರೆ ಅವರನ್ನು ಯಾವಾಗಲೂ ಕ್ಷಮಿಸುತ್ತಿದ್ದರು. ಕರ್ಮವಿಮುಖರಾದ ಸಾಧುಗಳನ್ನು ಅವರು ಮಠದಲ್ಲೇ ಇರಿಸಿಕೊಂಡು ಅವರಿಗೆ ಕೆಲಸವನ್ನು ನೀಡುತ್ತಿದ್ದರು. ಒಮ್ಮೆ ಅವರು ನನಗೆ ಹೇಳಿದರು, ''ನೋಡು, ಈ ಸಂಘದಲ್ಲಿ ನಾನಾ ಬಗೆಯ ಸಾಧುಗಳಿದ್ದಾರೆ. ಎಲ್ಲ ಜೊತೆಯಲ್ಲಿ ಹೊಂದಿಕೊಂಡು ಹೋಗಬೇಕು. ಕಂಬಳಿಯ ರೋಮಗಳನ್ನು ತೆಗೆಯುತ್ತಾ ಹೋದರೆ, ಕೊನೆಗೆ ಕಂಬಳಿಯೆ ಉಳಿಯುವುದಿಲ್ಲ!'' ಯಾರೂ ಪರಿಪೂರ್ಣರಲ್ಲವೆಂದು ಈ ಮಾತುಗಳ ಮೂಲಕ ನನಗೆ ತಿಳಿಸಿಕೊಟ್ಟರು. ಪರಿಪೂರ್ಣರಾಗಲೆಂದೇ ನಾವು ಈ ಸಂಘವನ್ನು ಸೇರಿದ್ದೇವೆ. ಮನುಷ್ಯನೆಂದ ಮೇಲೆ ಗುಣ-ದೋಷಗಳು ಇದ್ದೇ ಇರುತ್ತವೆ. ಸಾಧುಜೀವನವನ್ನು ನಡೆಸಲು ಅವರು ಎಲ್ಲರಿಗೂ ಅವಕಾಶವನ್ನು ನೀಡುತ್ತಿದ್ದರು.

ಮಾರ್ಚ್ ತಿಂಗಳು, ೧೯೬೫ರಲ್ಲಿ ನಾನವರಿಗೆ, ''ಮಹಾರಾಜ್, ನಮ್ಮ ಟ್ರೈನಿಂಗ್ ಸೆಂಟರಿನ ಎರಡನೇ ವರ್ಷದ convocation ಗೆ ನೀವು ಬರಬೇಕು,'' ಎಂದು ಆಮಂತ್ರಿಸಿದೆ. ಅವರು ಸಮ್ಮತಿಸುತ್ತ ''ಅಧ್ಯಕ್ಷತೆ ವಹಿಸಲು ನೀನು ಸ್ವಾಮಿ ಯತೀಶ್ವರಾನಂದರಜಿಯವರನ್ನು ಆಮಂತ್ರಿಸು,'' ಎಂದರು. ಅವರು ಹೇಳಿದಂತೆ ಸ್ವಾಮಿ ಯತೀಶ್ವರಾನಂದಜಿಯವರನ್ನು ಆಮಂತ್ರಿಸಿದಾಗ ಮೊದಲು ಅವರದಕ್ಕೆ ಒಪ್ಪಲಿಲ್ಲ. ಹುಡುಗಾಟವೆಂಬಂತೆ ನಾನು ''Maharaj, how can there be convocation without the Vice-Chancellor?'' ಎಂದಾಗ ಅವರು ನನಗೆ ಬೈದರೂ, ಅವರು convocation ಗೆ ಬಂದು ಸಾಧುಜೀವನದ ಕುರಿತು ಕೆಲವು ಉಪದೇಶಗಳನ್ನು ನೀಡಿದರು. ಅವುಗಳನ್ನು ಬರೆದಿಟ್ಟುಕೊಂಡಿದ್ದರೆ ಅದೆಷ್ಟು ಉಪಯುಕ್ತ ಮಾತುಗಳನ್ನು ಕಾಪಾಡಿಕೊಳ್ಳಬಹುದಿತ್ತು!

೧೯೬೫ರ ಅಕ್ಟೋಬರ್ ತಿಂಗಳಲ್ಲಿ ಸ್ವಾಮಿ ಮಾಧವಾನಂದಜಿಯವರ ದೇಹತ್ಯಾಗದ ಬಳಿಕ ಅಧ್ಯಕ್ಷ ಪದವಿ ಬಹಳ ಸಮಯ ಖಾಲಿಯಾಗಿಯೇ ಉಳಿದಿತ್ತು . ಕಡೆಗೆ ೨೨ ಫೆಬ್ರವರಿ ೧೯೬೬ರ ಠಾಕೂರರ ಜನ್ಮದಿನದಂದು ಪ್ರಭು ಮಹಾರಾಜರು ಸಂಘದ ಹತ್ತನೆಯ ಅಧ್ಯಕ್ಷರಾದರು. ಅಂದು ಅವರು ಬ್ರಹ್ಮಚರ್ಯ ಹಾಗೂ ಸಂನ್ಯಾಸ ದೀಕ್ಷೆಗಳನ್ನು ಕೊಟ್ಟರು. ಆ ದಿನ ನಾನು ಬ್ರಹ್ಮಚರ್ಯ ದೀಕ್ಷೆಯನ್ನು ಪಡೆದು, ಮುಂದೆ ೧೯೬೮ರ ಫೆಬ್ರವರಿ ೧೯ರಂದು ಸಂನ್ಯಾಸ ದೀಕ್ಷೆಯನ್ನು ಪಡೆದೆ. ೧೯೭೧ರ ಜನವರಿ ತಿಂಗಳ ಪ್ರಾರಂಭದಲ್ಲಿ ಸ್ವಾಮಿ ನಿರ್ವಾಣಾನಂದಜಿ ನನ್ನನ್ನು ಅದ್ವೈತ ಆಶ್ರಮದಿಂದ ಬರಹೇಳಿ, ''ನಾನು ನಿನ್ನ ಹೆಸರನ್ನು ಹಾಲಿವುಡ್ ಆಶ್ರಮಕ್ಕಾಗಿ ಸೂಚಿಸಿದ್ದೇನೆ. ಪ್ರಭು ಮಹಾರಾಜರೇನಾದರೂ ಈ ಬಗ್ಗೆ ನಿನ್ನನ್ನು ಕೇಳಿದರೆ 'ಆಗದು' ಎನ್ನಬೇಡ,'' ಎಂದರು. ಆನಂತರ ಒಂದು ದಿನ ಪ್ರಭು ಮಹಾರಾಜರು ಫೋನ್‌ಮೂಲಕ ಅದ್ವೈತಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಬುಧಾನಂದಜಿಯವರಿಗೆ ತಮ್ಮನ್ನು ಮೂರು ಗಂಟೆಯೊಳಗೆ ಬಂದು ಕಾಣಲು ಹೇಳಿದರು. ಕಾರಣ, ಅಂದು ಸಂಜೆ ೪ ಗಂಟೆಗೆ ನಡೆಯುವ ಮೀಟಿಂಗ್‌ನಲ್ಲಿ ನನ್ನನ್ನು ಅಮೇರಿಕಾಗೆ ಕಳುಹಿಸುವ ಬಗ್ಗೆ ವಿಚಾರ ಮಾಡುವರು. ಬುಧಾನಂದಜಿಯವರು ಊಟವಾದ ಬಳಿಕ ಟ್ಯಾಕ್ಸಿಯಲ್ಲಿ ಮಠಕ್ಕೆ ಹೋದಾಗ, ಮಹಾರಾಜರು ಅವರೊಡನೆ ನನ್ನ ವರ್ಗಾವಣೆಯ ಬಗ್ಗೆ ಹೇಳಿದರು. ಸ್ವಾಮಿ ಬುಧಾನಂದಜಿಯವರು ತಮ್ಮ ಇಚ್ಛೆಯ ವಿರುದ್ಧವಾಗಿಯೇ ಇದಕ್ಕೆ ಒಪ್ಪಿದರು. ೧೯೭೧ರ ಸ್ವಾಮೀಜಿಯವರ ಜಯಂತಿಯಂದು ಸ್ವಾಮಿ ಗಂಭೀರಾನಂದಜಿ ನನ್ನನ್ನು ಕರೆದು ಹಾಲಿವುಡ್‌ಗೆ ಹೋಗಬೇಕೆಂಬ ವಿಚಾರವನ್ನು ತಿಳಿಸಿದರು.

ಅನಂತರ ನಾನು ಪ್ರಭುಮಹಾರಾಜರನ್ನು ''ಮಹಾರಾಜ್, ನಾನೆಂದೂ ದಕ್ಷಿಣ ಭಾರತವನ್ನು ನೋಡಿಲ್ಲ. ನನಗೆ ಒಂದು ತಿಂಗಳ ರಜೆ ನೀಡಿ,'' ಎಂದು ವಿನಂತಿಸಿಕೊಂಡಾಗ ಅವರು ಸಂತೋಷದಿಂದ ಅನುಮತಿ ಕೊಟ್ಟರು. ನಾನಾಗ ಮದ್ರಾಸು, ತಿರುಪತಿ, ತಿರುಚ್ಚಿ, ರಾಮೇಶ್ವರ, ಮದುರೈ , ತ್ರಿವೇಂದ್ರಂ , ಕನ್ಯಾಕುಮಾರಿ, ಕೊಯಮತ್ತೂರು, ಊಟಿ, ಮೈಸೂರು, ಬೆಂಗಳೂರುಗಳಿಗೆ ಹೋಗಿ ಮದ್ರಾಸಿನ ಮೂಲಕ ಕಲ್ಕತ್ತಕ್ಕೆ ಹಿಂದಿರುಗಿದೆ. ೧೯೭೧ರ ಮೇ ೩೧ರಂದು ಬೊಂಬಾಯಿಯ ಗೇಟ್ ವೇ ಆಫ್ ಇಂಡಿಯಾದಲ್ಲಿ ಸ್ವಾಮಿ ವಿವೇಕಾನಂದರ ಮೂರ್ತಿ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಭವ್ಯವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಆಗ ಸ್ವಾಮಿ ಹಿರಣ್ಮಯಾನಂದಜಿಯವರು ಮುಂಬೈ ಆಶ್ರಮದ ಅಧ್ಯಕ್ಷರಾಗಿದ್ದರು. ಪ್ರಭು ಮಹಾರಾಜ್, ಭರತ್ ಮಹಾರಾಜ್, ಸೂರ್ಯ ಮಹಾರಾಜ್ ಹಾಗು ಇತರ ಗಣ್ಯ ಸಂನ್ಯಾಸಿಗಳು ಉತ್ಸವದಲ್ಲಿ ಭಾಗವಹಿಸಿದ್ದರು. ಮೇ ೨೪ರಂದು ಸ್ವಾಮಿ ಗಂಭೀರಾನಂದಜಿ ಹಾಗೂ ನಿರ್ವಾಣಾನಂದಜಿಯವರೊಡನೆ ನಾನು ಈ ಉತ್ಸವಕ್ಕೆಂದು ಮುಂಬೈಗೆ ಹೋದೆ. ಈ ಸಂದರ್ಭದಲ್ಲಿ ಮುಂಬೈ ಆಶ್ರಮದಲ್ಲಿ ಒಂದು ಗ್ರೂಪ್ ಫೋಟೋ ತೆಗೆಯಲಾಯಿತು.

ಜೂನ್ ೧ರಂದು ನಾನು ಅಮೇರಿಕಾಗೆ ಹೋಗಬೇಕಿತ್ತು . ನಾನು ಪ್ರಭು ಮಹಾರಾಜರಿಂದ ಬೀಳ್ಕೊಳ್ಳಲು ಹೋದಾಗ, ''ಮಹಾರಾಜ್, ನಾನು ಅದೆಲ್ಲಿಗೆ ಹೋಗುತ್ತಿರುವೆನೆಂದು ಗೊತ್ತಿಲ್ಲ. ನಾನೆಂದೂ ವಿದೇಶಕ್ಕೆ ಹೋಗಿಲ್ಲ. ಹಾಗು ಅದರ ಬಗ್ಗೆ ಹೆಚ್ಚಿನ ತಿಳುವಳಿಕೆಯೂ ನನಗಿಲ್ಲ. ನನ್ನನ್ನು ಆಶೀರ್ವದಿಸಿ'' ಎಂದು

ಕೇಳಿಕೊಂಡಾಗ, ''ಭಯಪಡಬೇಡ, ನೀನು ಹಾಲಿವುಡ್‌ಗೆ ಹೋಗುತ್ತಿರುವುದು ಠಾಕೂರರ ಕಾರ್ಯಕ್ಕಾಗಿ. ಠಾಕೂರರು ನಿನ್ನನ್ನು ನೋಡಿಕೊಳ್ಳುತ್ತಾರೆ'' ಎಂಬ ಅಭಯವನ್ನು ನೀಡುತ್ತ ಕೆಲವು ಸಿಹಿತಿಂಡಿಗಳನ್ನೂ ಒಂದು ಮಾವಿನ ಹಣ್ಣನ್ನೂ ನನಗೆ ಕೊಟ್ಟರು.

೧೯೭೭ರ ಜುಲೈಯಲ್ಲಿ ಹಾಲಿವುಡ್‌ನಿಂದ ಮೊದಲ ಬಾರಿ ಮಠಕ್ಕೆ ಬಂದೆ. ಪ್ರಭು ಮಹಾರಾಜರಿಗೆ ಪ್ರಣಾಮ ಮಾಡುತ್ತಿದ್ದಂತೆಯೆ ಅವರು ನಗುತ್ತ ತಮ್ಮ ಸೇವಕರನ್ನುದ್ದೇಶಿಸಿ, ''ಇವನ ತಲೆಯ ಮೇಲೆ ಗಂಗಾಜಲವನ್ನು ಸಿಂಪಡಿಸು; ಒಂದು ಕುರ್ಚಿಯನ್ನು ಕೊಡು,'' ಎಂದರು. ನಾನು ನೆಲದ ಮೇಲೆ ಅವರ ಪದತಲದಲ್ಲಿ ಕುಳಿತು ಹೇಳಿದೆ, ''ಮಹಾರಾಜ್, ನಿಮ್ಮೆದುರು ಕುರ್ಚಿಯಲ್ಲಿ ಕುಳಿತುಕೊಳ್ಳಲು ನಾಚಿಕೆಯಾಗುತ್ತದೆ.'' ಅವರು ನಗುತ್ತ ''ಹಾಗಾದರೆ ಒಂದು ಟೇಬಲ್ ಕೊಡು'' ಎಂದರು. ಮತ್ತೆ ಅವರೊಂದಿಗೆ ಪಾಶ್ಚಾತ್ಯದ ಕಾರ್ಯ-ಕಲಾಪಗಳ ಬಗ್ಗೆ ಅನೇಕ ವಿಷಯಗಳನ್ನು ಮಾತನಾಡಿದೆ.

ಸ್ವಾಮಿ ಸತ್ಪ್ರಕಾಶಾನಂದಜಿಯವರಿಗೆ ನೆರವಾಗಲೆಂದು ೧೯೭೫ರಲ್ಲಿ ನನ್ನನ್ನು ಸೆಂಟ್ ಲೂಯಿಸ್‌ಗೆ ವರ್ಗಾವಣೆ ಮಾಡಿದರು. ಅವರು ೧೯೭೯ರಲ್ಲಿ ದೇಹತ್ಯಾಗ ಮಾಡಿದಾಗ ಪ್ರಭು ಮಹಾರಾಜರು ನನಗೆ ದೀಕ್ಷೆಯನ್ನು ಕೊಡಲು ಅನುಮತಿ ನೀಡಿ, ಯಾವ ಮಂತ್ರವನ್ನು ಕೊಡಬೇಕೆಂಬುದನ್ನೂ ಬರೆದು ಕಳುಹಿಸಿದರು.

೧೯೮೨ರಲ್ಲಿ ನಾನು ಮತ್ತೆ ಮಠಕ್ಕೆ ಬಂದಾಗ ಅವರೊಡನೆ ಮಾತನಾಡಿದ ಅನೇಕ ವಿಷಯಗಳಲ್ಲಿ ಎಲ್ಲವೂ ನನಗೆ ನೆನಪಿಲ್ಲವಾದರೂ ಶ್ರೀಮಾತೆಯವರಿಂದ ಅವರು ದೀಕ್ಷೆಯನ್ನು ಪಡೆದ ಕತೆ ಹೇಳಿದ್ದರೆಂಬುದು ನೆನಪಿದೆ. ಅವರು, ಹರೀಶ ಮಹಾರಾಜ್ (ಸ್ವಾಮಿ ಸತ್ಪ್ರಕಾಶಾನಂದಜಿ) ಶರದಿಂದು ಮಹಾರಾಜ್(ಸ್ವಾಮಿ ವಿಶ್ವನಾಥಾನಂದಜಿ) ಮೊದಲಾದವರು ಹೌರಾದಿಂದ ಮಾರ್ಟಿನ್ ಟ್ರೇನ್‌ನಲ್ಲಿ ಚಾಂಪಾಡಾಂಗಾಗೆ ಹೋಗಿ ಅಲ್ಲಿಂದ ನಡೆಯಲು ಪ್ರಾರಂಭಿಸಿದರು. ದಾರಿಯಲ್ಲಿ ಹರೀಶರು ತೀವ್ರವಾದ ಭೇದಿಗೆ ಒಳರಾದರು. ವ್ಯಾಧಿಯ ಯಾವ ಉಪಶಮನೆಯೂ ಆಗದಿದ್ದಾಗ, ಈ ಸ್ಥಿತಿಯಲ್ಲಿ ಅವರನ್ನು ಜಯರಾಮಬಾಟಿಗೆ ಕರೆದುಕೊಂಡು ಹೋಗುವುದು ಸರಿಯಲ್ಲ; ಶ್ರೀಮಾತೆಯವರಿಗೆ ಬಹಳ ತೊಂದರೆಯಾಗುವುದೆಂದು ಪ್ರಭು ಮಹಾರಾಜರು ಹೇಳಿದರು. ಹರೀಶ್ ಮಹಾರಾಜರು ಹಾಗೂ ಶರದಿಂದು ಮಹಾರಾಜರು ಎತ್ತಿನಗಾಡಿಯಲ್ಲಿ ಮತ್ತೆ ಚಾಂಪಡಾಂಗಾಕ್ಕೆ ಹಿಂದಿರುಗುವರೆಂದು ನಿರ್ಧರಿಸಲಾಯಿತು. ಜಯರಾಮಬಾಟಿಯ ಹಾದಿಯಲ್ಲಿ ಒಂದು ರಾತ್ರಿ ಅವರು ದ್ವಾರಕೇಶ್ವರ ನದಿಯ ದಂಡೆಯ ಮೇಲೆ ಕಳೆದುದಾಗಿಯೂ ಹೇಳಿದರು. ಅನಂತರ ಕಾಮಾರಪುಕುರದ ದಾರಿಯಾಗಿ ಜಯರಾಮಬಾಟಿಗೆ ಹೋಗಿ ಶ್ರೀಮಾತೆಯವರಿಂದ ದೀಕ್ಷೆಯನ್ನು ಪಡೆದುದಾಗಿ ಪ್ರಭು ಮಹಾರಾಜರು ಹೇಳಿದರು.

ಬೇಲೂರು ಮಠದಲ್ಲಿದ್ದಾಗ ನಡೆದ ಕೆಲವು ಘಟನೆಗಳು ನೆನಪಿಗೆ ಬರುತ್ತಿದೆ. ಪ್ರಭು ಮಹಾರಾಜರು ಆಗ ಜನರಲ್ ಸೆಕ್ರೆಟರಿ. ಹಳೆಯ ಮಿಷನ್ ಆಫೀಸಿನ ಮೇಲಂತಸ್ತಿನ ಕೋಣೆಯಲ್ಲಿ ಮಹಾರಾಜರೊಂದಿಗೆ ಮಾತನಾಡುತ್ತಿದ್ದೆ. ಆಗ ಮಠದ ಹಜಾಮ ರಾಮಮೂರತ್ ಕೋಣೆಯೊಳಗೆ ಬಂದು, ಮಹಾರಾಜರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತ, ''ಪ್ರಭು, ಮೇರೆ ಅವಗುಣ ಚಿತ್ ನ ಧರೋ'' ಎಂದಾಗ ಮಹಾರಾಜರು 'ಹೋ... ಹೋ...' ಎಂದು ಗಟ್ಟಿಯಾಗಿ ನಕ್ಕುಬಿಟ್ಟರು. ಬೆಳಿಗ್ಗೆ ಮಹಾರಾಜರ ಕೂದಲು ತೆಗೆಯುವುದನ್ನು ರಾಮಮೂರತ್ ಮರೆತುಬಿಟ್ಟಿದ್ದನು. ಆದ್ದರಿಂದ ಸಂಜೆ ಅವರಲ್ಲಿಗೆ ಹೋಗಿ ಈ ರೀತಿ ಕ್ಷಮೆ ಯಾಚಿಸಿದ್ದನು.

ಪ್ರಭು ಮಹಾರಾಜರು ಪ್ರೆಸಿಡೆಂಟ್ ಆಗಿದ್ದಾಗ ನಾವೆಲ್ಲ ಒಂದು ದಿನ ಅವರಿಗೆ ಪ್ರಣಾಮ ಮಾಡಲು ಹೋಗಿದ್ದೆವು. ಆಗ ಸ್ವಾಮಿ ಗುಣಾತೀತಾನಂದರು ಅಲ್ಲಿ ಹಾಜರಾದರು. ಒಳ್ಳೆಯ ಪಂಡಿತರಾಗಿದ್ದ ಅವರ ತಲೆ ಸ್ವಲ್ಪ ತಳಮಳವಾಗಿತ್ತು. ಅವರು ಬಂದು ಕುಳಿತು ಪ್ರಭು ಮಹಾರಾಜರಿಗೆ ಹೇಳಿದರು, ''ಪ್ರಭು, ನೀನು ಪ್ರೆಸಿಡೆಂಟ್ ಆಗಿರುವೆಯೆಂದು ಎಲ್ಲವೂ ನಿನ್ನ ಬಳಿ ಬರುತ್ತವೆ. ನಾನು ಈ ಎಳನೀರುಗಳನ್ನು ತೆಗೆದುಕೊಳ್ಳುತ್ತೇನೆ.'' ''ಬರಿಯ ಎಳನೀರೇಕೆ? ನಿನಗೇನು ಬೇಕೋ ಎಲ್ಲವನ್ನೂ ತೆಗೆದುಕೊಂಡು ಹೋಗು'' ಎಂದು ಮಹಾರಾಜರು ನಗುತ್ತ ಹೇಳಿದರು.

ಮತ್ತೊಂದು ದಿನ ಸ್ವಾಮಿ ದಯಾನಂದರು ಮಠಕ್ಕೆ ಬಂದಿದ್ದಾರೆ. ಅವರು ಸಂಘ-ಗುರುಗಳಿಗೆ ಪ್ರಣಾಮ ಮಾಡಲು ಹೋಗುತ್ತಿದ್ದಂತೆಯೆ ಪ್ರಭುಮಹಾರಾಜರು ಕುರ್ಚಿಯಿಂದ ಮೇಲೆದ್ದು ದಯಾನಂದಜಿಯವರ ಪದಧೂಳಿಯನ್ನು ತೆಗೆದುಕೊಂಡರು. ಅವರು ಸ್ವಾಮಿ ಧರ್ಮಾನಂದಜೀಯವರಿಗೂ ಪ್ರಣಾಮ ಮಾಡುವುದನ್ನು ನಾನು ನೋಡಿದ್ದೇನೆ. ಸಂನ್ಯಾಸದಲ್ಲಿ ಹಿರಿಯರಾದವರಿಗೆ ಕಿರಿಯರು (ವಯಸ್ಸಿನಲ್ಲಿ ಹಿರಿಯರಾಗಿದ್ದರೂ) ಪ್ರಣಾಮ ಸಲ್ಲಿಸಿ ಗೌರವವನ್ನು ಸೂಚಿಸುವುದು ಮಠದ ನಿಯಮ.

ಬೇಲೂರು ಮಠದಲ್ಲಿ ಪ್ರಭು ಮಹಾರಾಜರು ಆರತಿಯ ಬಳಿಕ ಠಾಕೂರರಿಗೆ ನಮಸ್ಕರಿಸಲು ಹೋಗುತ್ತಿದ್ದುದು ನೋಡುವಂಥದಾಗಿತ್ತು. ಬಹಳ ಸಮಯ ಅವರು ಠಾಕೂರರೆದುರು ನಿಂತಿದ್ದು, ಬಳಿಕ ಠಾಕೂರರನ್ನು ಬಲಗಡೆಯಲ್ಲಿರಿಸಿ ಪ್ರದಕ್ಷಿಣೆ ಮಾಡಿ ಮತ್ತೆ ಪ್ರಣಾಮ ಮಾಡುತ್ತಿದ್ದರು. ಆ ಬಳಿಕ ರಾಜಾ ಮಹಾರಾಜರ (ಸ್ವಾಮಿ ಬ್ರಹ್ಮಾನಂದರ) ಮಂದಿರದಲ್ಲಿ ಪ್ರಣಾಮ ಸಲ್ಲಿಸಿ ಮಂದಿರದ ಆಗ್ನೇಯ ದಿಕ್ಕಿನ ಭವತಾರಿಣಿ ತಾಯಿಯ ಕಡೆಗೆ ತಿರುಗಿ ಪ್ರಣಾಮ ಮಾಡುತ್ತಿದ್ದರು. ಅದಾದ ಮೇಲೆ ಶ್ರೀಮಾತೆ ಹಾಗು ಸ್ವಾಮೀಜಿಯರ ಮಂದಿರದಲ್ಲಿ ಪ್ರಣಾಮ ಮಾಡಿ ತಮ್ಮ ಕೋಣೆಗೆ ಹಿಂದಿರುಗುತ್ತಿದ್ದರು.

ಇಂತಹ ಎಲ್ಲ ಸಾಧುಗಳ ಆತ್ಮತ್ಯಾಗ, ವೈರಾಗ್ಯ ಯುಕ್ತ ಪವಿತ್ರ ಜೀವನ, ಆದರ್ಶಾನುರಾಗ ಹಾಗು ಪ್ರೀತಿ ರಾಮಕೃಷ್ಣ ಸಂಘವನ್ನು ಉಜ್ವಲವಾಗಿರಿಸಿವೆ. ❋